## ಸಾಕ್ಸ್- ಶೂ ಬೇಡ; ಸುಂದರ ಪ್ರಿಂಟ್ ಆಯ್ದುಕೊಳ್ಳಿ

ಹೊರಗೆ ಹೋಗುವಾಗ ಮಕ್ಕಳು ಎಲ್ಲೆಂದರಲ್ಲಿ ಓಡಾಡಿ ಕಾಲುಗಳನ್ನು ಗಲೀಜು ಮಾಡಿಕೊಳ್ಳುತ್ತವೆ ಎಂದು ಸಾಕ್ಸ್– ಶೂ ಹಾಕಿ ಪಾದಗಳನ್ನು ಭದ್ರಪಡಿಸುವವರೇ ಹೆಚ್ಚು. ಆದರೆ ಬೇಸಿಗೆಯಲ್ಲಿ ಮಕ್ಕಳಿಗೆ ಇದು ಕಿರಿಕಿರಿ ಉಂಟು ಮಾಡುತ್ತದೆ. ಗಾಳಿಯಾಡದಂತಾಗಿ ಪಾದಗಳಲ್ಲಿ ಗುಳ್ಳೆಗಳಾಗುವ ಅಪಾಯ ಇರುತ್ತದೆ. ಫ್ಲಿಪ್ ಫ್ಲಾಪ್ ಅಥವಾ ಕ್ರಾಕ್ಸ್ ಬೇಸಿಗೆಯಲ್ಲಿ ಉತ್ತಮ ಆಯ್ಕೆ.

ಉಡುಗೆಗಳಲ್ಲೂ ಆಕರ್ಷಕ ವಿನ್ಯಾಸವನ್ನು ಬಯಸುವಿರಾದರೆ ಮಕ್ಕಳಿಗೆ ಹೆಚ್ಚು ಪ್ರಿಯವಾಗುವ ಕಾರ್ಟೂನ್ ಪಾತ್ರದ ಪ್ರಿಂಟ್‌ಗಳನ್ನು ಆಯ್ಕೆಮಾಡಿಕೊಳ್ಳಿ. ಇದರಿಂದ ಮಕ್ಕಳೂ ಖುಷಿಯಾಗುತ್ತವೆ.

ಹೂವಿನ ಪ್ರಿಂಟ್, ಎಲೆ, ಹಕ್ಕಿಗಳ ಪ್ರಿಂಟ್‌ಗಳು ಸಹ ಟ್ರೆಂಡ್‌ನಲ್ಲಿವೆ. ಶಾರ್ಟ್ ಸ್ಕರ್ಟ್, ಶಾರ್ಟ್ ಡ್ರೆಸ್, ಮಿನಿ ಡ್ರೆಸ್‌ಗಳು ಈ ಸಮಯದಲ್ಲಿ ಹೆಚ್ಚು ಸೂಕ್ತ. ಅಲ್ಲದೆ, ಕ್ಲೋಸ್ಡ್ ನೆಕ್ ಡ್ರೆಸ್ ಹಾಕುವುದಕ್ಕಿಂತ ರೌಂಡ್ ನೆಕ್ ಉಡುಗೆ ಸೂಕ್ತ. ಬಿಸಿಲಿನಲ್ಲಿ ಹೋಗಬೇಕೆಂದರೆ ಹತ್ತಿ ಬಟ್ಟೆಯ ತುಂಬು ತೋಳಿನ ಉಡುಗೆ ತೊಡಿಸಿ.

ಸರಾಗವಾಗಿ ಆಗುವುದರಿಂದ ಬೆವರುವಿಕೆಯನ್ನು ತಪ್ಪಿಸಬಹುದು. ಸಿಂಥೆಟಿಕ್, ರೆಯಾನ್, ಜರಿ, ರೇಷ್ಮೆ ಬಟ್ಟೆಗಳನ್ನು ಈ ಸಮಯದಲ್ಲಿ ವಾರ್ಡ್‌ರೋಬ್‌ನ ಮೂಲೆಗೆ ತಳ್ಳುವುದೇ ಹೆಚ್ಚು ಸೂಕ್ತ. ಈ ಬಟ್ಟೆಗಳು ಶಾಖವನ್ನು ಹೆಚ್ಚಿಸುವುದರಿಂದ ಚರ್ಮಕ್ಕೆ ಮಾರಕವೇ ಹೆಚ್ಚು. ಅದರಲ್ಲೂ ಮಕ್ಕಳ ಮೃದು ಚರ್ಮದ ಮೇಲೆ ಬೆವರು ಗುಳ್ಳೆಗಳು ಕಾಣಿಸಿಕೊಳ್ಳುವ ಅಪಾಯವೂ ಇದೆ. ಇದರಿಂದ ಹತ್ತಿಯಿಂದ ತಯಾರಾದ ಬಟ್ಟೆಗಳನ್ನು ಅಪ್ಪಿಕೊಳ್ಳುವುದೇ ಸೂಕ್ತ. ಬಿರುಬೇಸಿಗೆಯಲ್ಲೂ ಮಕ್ಕಳನ್ನು ಲವಲವಿಕೆಯಿಂದ ಇರುವಂತೆ ಮಾಡುತ್ತವೆ ಈ ಉಡುಗೆಗಳು.

ಮಕ್ಕಳನ್ನು ಸದಾ ಟ್ರೆಂಡಿಯಾಗಿರಿಸಬೇಕು ಎಂಬುದು ಈಗಿನ ಬಹುತೇಕ ತಾಯಂದಿರ ಆಸೆ. ಇದಕ್ಕೆ ಕಾಟನ್ ಅಡ್ಡಿಯಾಗದಿರಲಿ ಎಂಬುದೂ ವಿನ್ಯಾಸಕಾರರ ಕಾಳಜಿ. ಅಂತಲೇ ಹತ್ತಿ ಬಟ್ಟೆಯ ಸಾಕಷ್ಟು ಟ್ರೆಂಡೀ ಉಡುಗೆಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ಅವುಗಳನ್ನು ಮಕ್ಕಳಿಗೆ ತೊಡಿಸಿ ಅಮ್ಮಂದಿರೂ ಬೀಗಬಹುದು. ಆನ್‌ಲೈನ್ ಶಾಪಿಂಗ್ ತಾಣಗಳಲ್ಲೂ ಬೇಸಿಗೆ ಉಡುಗೆಗಳು ರಿಯಾಯಿತಿ ದರದಲ್ಲಿ ಸಿಗುತ್ತವೆ. ಟ್ರೆಂಡೀ ಕಾಟನ್ ಉಡುಗೆಗಳು ಗ್ರಾಹಕರನ್ನು ಸೆಳೆಯುತ್ತಿವೆ. ನಿಮಗಿಷ್ಟವಾದ ಬಟ್ಟೆಯನ್ನು ಕುಳಿತಲ್ಲೇ ಆರ್ಡರ್ ಮಾಡಿ ತೊಡಿಸಬಹುದು.





ಬೇಸಿಗೆ ಸಮಯದಲ್ಲೂ ಮದುವೆ, ಗೃಹಪ್ರವೇಶ, ಜಾತ್ರೆ, ಹಬ್ಬ ಹರಿದಿನ ಇತ್ಯಾದಿ ಸಮಾರಂಭಗಳೇನು ಕಡಿಮೆ ಇರುವುದಿಲ್ಲ. ಸಮಾರಂಭಗಳಲ್ಲಿ ಮಕ್ಕಳಿಗೆ ಒಪ್ಪುವಂತಹ, ಕಿರಿಕಿರಿ ಅನುಭವಿಸದಂತಹ, ದೇಹಕ್ಕೂ ಒಗ್ಗುವಂತಹ ಉಡುಗೆಗಳ ಆಯ್ಕೆ ನಿಮ್ಮದಾಗಿರಲಿ.

ಅಮ್ಮಂದಿರ ಆಯ್ಕೆಗೆ ಕೆಲವೊಂದು ಟಿಪ್ಸ್ ಇಲ್ಲಿವೆ.

- ಸಮಾರಂಭಗಳಿಗೆ ಅದ್ದೂರಿಯ ಫ್ರಾಕ್, ಸಿಂಥೆಟಿಕ್ ಪೈಜಾಮ ಬೇಡವೇ ಬೇಡ.
- ಮೊಣಕಾಲು ಮಟ್ಟದ ಆಕರ್ಷಕ ಕಾಟನ್ ಫ್ರಾಕ್, ಕಾಟನ್ ಅಂಗಿ ಚಡ್ಡಿ ತೊಡಿಸಿದರೆ ಸಾಕು.
- ಚೂಡಿದಾರ, ಉದ್ದುದ್ದ ಮಿಡಿಗಳನ್ನು ದೂರ ತಳ್ಳುವುದೇ ಸೂಕ್ತ.
- ಮೆತ್ತಗಿನ ಅಂಗಿ, ಚಡ್ಡಿ, ಸ್ಲೀವ್‌ಲೆಸ್ ಫ್ರಾಕ್– ಟೀ ಶರ್ಟ್‌ಗಳನ್ನು ತೊಡಿಸುವುದರಿಂದ ಮಕ್ಕಳೂ ಹೆಚ್ಚು ಆರಾಮದಾಯಕವಾಗಿರಬಹುದು.
- ನಿಮ್ಮ ಡ್ರೆಸ್ ಜೊತೆ ಮಗುವಿನ ಉಡುಪನ್ನೂ ಮ್ಯಾಚ್ ಮಾಡಿಕೊಳ್ಳಬೇಕೆಂದು ಬಯಸಿದರೆ ಟೀ–ಶರ್ಟ್, ಶಾರ್ಟ್ ಸ್ಕರ್ಟ್, ಕಾಟನ್ ಪ್ಯಾಂಟ್ ಹೆಚ್ಚು ಸೂಕ್ತ.
- ಡೆನಿಮ್, ಜೀನ್ಸ್ ಉಡುಗೆಗಳನ್ನೂ ಈ ಸಮಯದಲ್ಲಿ ದೂರವೇ ಇರಿಸಿ. ಭಾರವಾದ ಉಡುಗೆ ಚರ್ಮಕ್ಕೆ ಹಾನಿ ಉಂಟು ಮಾಡಬಹುದು.

### ಬಣ್ಣಗಳ ಆಯ್ಕೆ

ಬೇಸಿಗೆ ಸಮಯದಲ್ಲಿ ಬಣ್ಣಗಳ ಆಯ್ಕೆ ಬಗ್ಗೆಯೂ ಗಮನಹರಿಸುವುದು ಒಳಿತು. ಗಾಢ ಬಣ್ಣದ ಉಡುಗೆಗಳು ಉಲ್ಲಾಸದಿಂದ ಕೂಡಿರುತ್ತವೆಯಾದರೂ ಈ ಸಮಯಕ್ಕೆ ಹೊಂದುವುದಿಲ್ಲ. ತಿಳಿ ಬಣ್ಣಗಳು ಶಾಖವನ್ನು ಹೀರಿಕೊಳ್ಳುವುದಿಲ್ಲ. ಹಾಗಾಗಿ ತಿಳಿ ಬಣ್ಣದ ಉಡುಪುಗಳ ಆಯ್ಕೆ ನಿಮ್ಮದಾಗಿರಲಿ. ಉದಾಹರಣೆಗೆ ತಿಳಿನೀಲಿ, ತಿಳಿಹಳದಿ, ತಿಳಿಗುಲಾಬಿ, ಬಿಳಿ ಬಣ್ಣದ ಉಡುಗೆಗಳು ಸೂಕ್ತ. ಕಪ್ಪು ಅಥವಾ ಗಾಢ ಬಣ್ಣದ ಉಡುಗೆಗಳಿಗಿಂತ ಇವು ಕಣ್ಣಿಗೂ, ಮನಸಿಗೂ ಹಿತವೆನಿಸುತ್ತವೆ.

ಸರಳ ಹಾಗೂ ಸಹಜ ಮೇಕಪ್ ಈ ಸಮಯದಲ್ಲಿರಲಿ. ಗ್ರ್ಯಾಂಡ್ ಡ್ರೆಸ್‌ಗಳು, ಮೈತುಂಬಾ ಒಡವೆಗಳನ್ನು ಹೇರಿದರೆ ಮಕ್ಕಳಿಗೆ ಕಿರಿಕಿರಿಯಾಗುತ್ತದೆ. ಅವರು ಮುದ್ದಾಗಿ ಕಾಣಬೇಕು ಎಂದು ಬಯಸುವಿರಾದರೆ ಹೆಚ್ಚು ಒಡವೆಗಳನ್ನು ಹೇರದೆ ಮೊಣಕಾಲು ಮಟ್ಟದ ಕಾಟನ್ ಫ್ರಾಕ್ ಅಥವಾ ಎಂಬ್ರಾಯಿಡರಿ, ಕುಂದನ್ ವರ್ಕ್ ಇರುವ ಕಾಟನ್ ಟೀ ಶರ್ಟ್, ಶಾರ್ಟ್ಸ್ ಹಾಕಿ.

ತಲೆಗೆ ಅತಿಯಾದ ಹೇರ್‌ಕ್ಲಿಪ್ ಬಳಕೆಯೂ ಒಳ್ಳೆಯದಲ್ಲ. ಕೂದಲಿನಲ್ಲಿ ಗಾಳಿಯಾಡದಂತಾಗಿ ಅಲರ್ಜಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಹಾಗೆಯೇ ಮಗುವಿಗೆ ಉದ್ದ ಕೂದಲು ಇದ್ದರೆ ಫ್ರೀ ಹೇರ್ ಸ್ಟೈಲ್ ಬೇಸಿಗೆ ಸಮಯದಲ್ಲಿ ಸೆಕೆಯನ್ನು ಇಮ್ಮಡಿಗೊಳಿಸುತ್ತದೆ. ಆದ್ದರಿಂದ ತಲೆಗೂದಲನ್ನು ಮೇಲಕ್ಕೆ ಎತ್ತಿ ಕಟ್ಟಿ ಕುತ್ತಿಗೆ ಭಾಗದಲ್ಲಿ ಗಾಳಿಯಾಡುವಂತಹ ಹೇರ್‌ಸ್ಟೈಲ್ ಒಳಿತು.

ಮೈಗಂಟಿಕೊಳ್ಳುವಂತಹ ಟೈಟ್ ಉಡುಗೆಗಳನ್ನು ಧರಿಸದಿರುವುದೇ ಸೂಕ್ತ. ಫಿಗರ್– ಹಗ್ಗಿಂಗ್, ಸ್ಕಿನ್ ಟೈಟ್ ಡ್ರೆಸ್‌ಗಳನ್ನು ಸಾಧ್ಯವಾದಷ್ಟು ತ್ಯಜಿಸಿ. ಸಡಿಲವಾದ ಡ್ರೆಸ್‌ಗಳ ಆಯ್ಕೆ ಇರಲಿ. ಈ ಬಗೆಯ ಉಡುಗೆಗಳಲ್ಲಿ ಗಾಳಿ ಸರಾಗವಾಗಿ ಹರಿದಾಡುವುದರಿಂದ, ಕೃತಕ ಗಾಳಿಯ ಅವಶ್ಯಕತೆ ಇರುವುದಿಲ್ಲ. ಅತಿಯಾದ ಬೆವರುವಿಕೆ, ಅದರಿಂದ ಉಂಟಾಗುವ ತುರಿಕೆಯನ್ನು ತಪ್ಪಿಸಬಹುದು. ಬಿಸಿಲಿನಲ್ಲಿ ಮಕ್ಕಳನ್ನು ಕರೆದುಕೊಂಡು ಹೋಗಲೇಬೇಕಾದ ಅನಿವಾರ್ಯ ಎದುರಾದರೆ 'ಸನ್ ಹ್ಯಾಟ್' ಬಳಸಿ. ಇವು ಮಕ್ಕಳನ್ನು ಆಕರ್ಷಕವಾಗಿ ಕಾಣುವಂತೆ ಮಾಡುತ್ತವೆ. ಜತೆಗೆ ಸೂರ್ಯನ ಶಾಖದಿಂದಲೂ ರಕ್ಷಿಸುತ್ತವೆ.